ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 04-01-2023

ಬಗದಲ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 01/2023 ಕಲಂ 279, 304(ಎ) ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ :-

ದಿನಾಂಕ 03.01.2023 ರಂದು 2030 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಿಂದ ಒಂದು ಎಮ್.ಎಲ್.ಸಿ ಇರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಬೇಟಿ ನೀಡಿ ಫೀರ್ಯಾದಿ ತಾಜುಶಹಾ ತಂದೆ ಜೈನುಶಹಾ ವಯ: 20 ವರ್ಷ ಸಾ|| ಮನ್ನಾಎಖೇಳಿ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿ ಹೇಳಿಕೆ ದೂರಿನ ಸಾರಾಂಶವೆನೆಂದರೆ ಫೀರ್ಯಾದಿಯು ತನ್ನ ತಂದೆ ಜೈನುಶಹಾ ಇವರಿಗೆ ತುಟಿಯ ಒಳಗೆ ಹುಣ್ಣುಗಳಾಗಿದ್ದು, ಆಸ್ಪತ್ರೆಗೆ ತೋರಿಸಿಕೊಂಡು ಬರಲು ಮಧ್ಯಾಹ್ನ 2 ಗಂಟೆಯ ಸುಮಾರಿಗೆ ತಮ್ಮ ಮೋಟಾರ ಸೈಕಲ ನಂ ಕೆಎ39ಆರ್7063 ನೇದರ ಮೇಲೆ ಮನ್ನಾಎಖೇಳಿಯಿಂದ ಬೀದರಗೆ ಹೋಗಿರುತ್ತಾರೆ. ಹೀಗಿರುವಲ್ಲಿ ದಿನಾಂಕ 03.01.2023 ರಂದು ರಾತ್ರಿ 7:15 ಗಂಟೆಯ ಸುಮಾರಿಗೆ ಬೀದರ ಚಿಂಚೋಳಿ ರಸ್ತೆಯ ಬಗದಲ ತಾಂಡಾ (ಬಿ) ಕಡೆಗೆ ಹೋಗುವ ಕಚ್ಚಾ ರಸ್ತೆಯ ಹತ್ತಿರ ಇವರ ತಂದೆಗೆ ರಸ್ತೆ ಅಪಘಾತವಾಗಿದ್ದು ಅಂತ ತಿಳಿಸಿರುತ್ತಾರೆ. ಜೈನುಶಹಾ ಇವರಿಗೆ ತಲೆಯ ಹಿಂದೆ ಭಾರಿ ರಕ್ತಗಾಯ, ಹಣೆಯ ಮೇಲೆ ಭಾರಿ ರಕ್ತಗಾಯ, ಎಡ ತುಟಿಯ ಹತ್ತಿರ ಭಾರಿ ರಕ್ತಗಾಯ, ಎಡಕಣ್ಣಿಗೆ ಭಾರಿ ರಕ್ತಗಾಯವಾಗಿರುತ್ತದೆ, ಆಗ ದಾರಿ ಹೊಕ್ಕರಿಗೆ ವಿಚಾರಿಸಲು ನಿಮ್ಮ ತಂದೆ ಬೀದರದಿಂದ ಮೋಟಾರ ಸೈಕಲ ಮೇಲೆ ಬರುತ್ತಿದ್ದಾಗ ಮನ್ನಾಎಖೇಳಿ ಕಡೆಯಿಂದ ಬೀದರ ಕಡೆಗೆ ಹೋಗುತ್ತಿದ್ದ ಯಾವುದೋ ವಾಹನದ ಚಾಲಕ ತನ್ನ ವಾಹನವನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿ ವಾಹನ ಸಮೇತ ಓಡಿ ಹೋಗಿರುತ್ತಾನೆ. ಅಂತ ತಿಳಿಸಿರುತ್ತಾರೆ. ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆಗೆ ತಂದಾಗ ರಾತ್ರಿ 8 ಗಂಟೆಗೆ ಮೃತಪಟ್ಟಿರುತ್ತಾರೆ ಅಂತ ವೈಧ್ಯಾಧಿಕಾರಿಗಳು ತಿಳಿಸಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.